# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1179 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23/12/2021 |
| ಉತ್ತರಿಸುವವರು | ಕಾರ್ಮಿಕ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಇಲಾಖೆಯ ವತಿಯಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ; ಆದ್ದರಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕಾರ್ಮಿಕ ಇಲಾಖೆಯು ಯಾವುದೇ ಉದ್ಯೋಗ ಮೇಳಗಳನ್ನು ಆಯೋಜಿಸಿರುವುದಿಲ್ಲ. |
| ಆ) | ಕಾರ್ಮಿಕ ಕೌಶಲ್ಯ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಕಳೆದ 2 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; | ಕೃಷಿ ಕಾರ್ಮಿಕರು ಮತ್ತು ಗಾರ್ಮೆಂಟ್ಸ್ ನೌಕರರ ಕೌಶಲ್ಯಾಭಿವೃದ್ಧಿಗಾಗಿ ಕಾರ್ಮಿಕ ಇಲಾಖೆಯ ವತಿಯಿಂದ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 2017-18ನೇ ಸಾಲಿನಿಂದ 'ಶ್ರಮ ಸಾಮರ್ಥ್ಯಯೋಜನೆ' ಎಂಬ ಶೀರ್ಷಿಕೆಯಡಿ 'ಟ್ರೈನಿಂಗ್-ಕಮ್-ಟೂಲ್‌ಕಿಟ್' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದು ಇದರಿಂದ ರಾಜ್ಯದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮಗೆ ಬೇಕಾದ ವೃತ್ತಿ ಕೌಶಲ್ಯ ಮತ್ತು ನೈಪುಣ್ಯತೆಯನ್ನು ಪಡೆಯುವುದಲ್ಲದೇ, ಈ ತರಬೇತಿ ಪಡೆದ ಅರ್ಹಕಾರ್ಮಿಕರಿಗೆ ತಮ್ಮ ವೃತ್ತಿಗನುಗುಣವಾದ ಉತ್ತಮ ಗುಣಮಟ್ಟದ ಉಪಕರಣಗಳನ್ನು ಪಡೆಯುತ್ತಾರೆ. ಜೊತೆಗೆ, ಕಾರ್ಮಿಕರಿಗೆ ಜೀವನಕೌಶಲ್ಯ, ಆರೋಗ್ಯ ಮತ್ತು ಸ್ವಾಸ್ಥ್ಯಗಳ ಬಗ್ಗೆ ಅರಿವು ಮೂಡಿಸುವುದು, ರಕ್ಷಣಾತ್ಮಕ ಸಲಕರಣೆಯ ಉಪಯೋಗ, ಪ್ರಮಾಣಪತ್ರ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ:<br><br>**ತರಬೇತಿ ಟೂಲ್‌ಕಿಟ್ ಕಾರ್ಯಕ್ರಮದ ಉದ್ದೇಶಗಳು:**<br>1. ರಾಜ್ಯದ ನೋಂದಾಯಿತ ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಅವರ ಅವಲಂಬಿತರ ಕೌಶಲ್ಯ ಅಭಿವೃದ್ಧಿಗೊಳಿಸುವುದು / ಉನ್ನತಿಗೊಳಿಸುವುದು. |
| ಇ) | ಕೃಷಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್ ನೌಕರರ ಕೌಶಲ್ಯ ಅಭಿವೃದ್ಧಿಗಾಗಿ ಯಾವ ರೀತಿಯ ಯೋಜನೆಗಳನ್ನು ಕಾರ್ಮಿಕ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದೆ; ಈ ಕಾರ್ಯಕ್ರಮಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | |

2. ರಾಜ್ಯದಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ದಕ್ಷಯುತವಾದ, ಆರೋಗ್ಯಕರ, ಯುಕ್ತ ಮತ್ತು ಕೌಶಲ್ಯ ಭರಿತ ಕಾರ್ಯನಿರ್ವಹಿಸುವ ಕಾರ್ಮಿಕರ ತಂಡವನ್ನು ರಚಿಸುವುದು.
3. ರಾಜ್ಯದ ಗ್ರಾಮೀಣ ಕ್ಷೇತ್ರದಲ್ಲಿ ಯುವ ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ ದಕ್ಷತೆಯನ್ನು ಹೆಚ್ಚಿಸುವುದು.
4. ನಿರ್ಮಾಣ ಕ್ಷೇತ್ರದಲ್ಲಿ ತೊಡಗಿದ ಕಾರ್ಮಿಕರಿಗೆ ಕಾರ್ಯಸುರಕ್ಷತೆ ಹಾಗೂ ಸ್ವಸ್ತತೆ ಬಗ್ಗೆ ಅರಿವು ಮೂಡಿಸುವುದು.
5. ಸ್ಥಳೀಯ ನಿರ್ಮಾಣ ಕಾರ್ಮಿಕರಿಗೆ ಉತ್ತಮ ಗುಣಮಟ್ಟದ ತರಬೇತಿ ನೀಡಿ, ರಾಜ್ಯದಲ್ಲಲ್ಲದೆ ಹೊರರಾಜ್ಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತೊಡಗಿಸಿಕೊಳ್ಳಬಹುದಾದಂತಹ ನಿರ್ಮಾಣ ಕೌಶಲ್ಯವನ್ನುಅಭಿವೃದ್ಧಿ ಪಡಿಸುವುದು.

'ಶ್ರಮ ಸಾಮರ್ಥ್ಯ ಯೋಜನೆ'ಯಡಿಯಲ್ಲಿ 2019-20ನೇ ಸಾಲಿನಲ್ಲಿ 4,239 ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.

ಮಂಡಳಿಯಿಂದ RPL (Recognization of Prior Learning) ತರಬೇತಿಯನ್ನು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡಲು ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡಿಸಿ, ಮಂಡಳಿಯಿಂದ ಕರ್ನಾಟಕ ರಾಜ್ಯದಾದ್ಯಂತ 1 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ RPL ತರಬೇತಿಯನ್ನು ನೀಡುವ ಗುರಿಯನ್ನು ಮಂಡಳಿ ಹೊಂದಿದ್ದು. 2020-21 ನೇ ಸಾಲಿನಲ್ಲಿ ಆರ್.ಪಿ.ಎಲ್ ಯೋಜನೆಯಡಿ 6,776 ಫಲಾನುಭವಿಗಳಿಗೆ ಮಂಡಳಿಯ ವತಿಯಿಂದ ತರಬೇತಿ ನೀಡಲಾಗಿದೆ.

ಜಿಲ್ಲಾವಾರು ವಿವರವನ್ನು **ಅನುಬಂಧ-01 ಮತ್ತು 02** ರಲ್ಲಿ ಲಗತ್ತಿಸಿದೆ.

**ಕಾಇ 561 ಎಲ್‌ಇಟ 2021**

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1179ಕ್ಕೆ ಅನುಬಂಧ-01

| ಶ್ರಮ ಸಾಮರ್ಥ್ಯ ಯೋಜನೆಯಡಿ 2019-20 ನೇ ಸಾಲಿನಲ್ಲಿ ತರಬೇತಿಯ ಪಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ನಿರ್ಮಿತಿಕೇಂದ್ರ | ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ |
| 1 | ಬಳ್ಳಾರಿ | 179 |
| 2 | ವಿಜಯಪುರ | 230 |
| 3 | ಚಿಕ್ಕಬಳ್ಳಾಪುರ | 64 |
| 4 | ಚಿತ್ರದುರ್ಗ | 285 |
| 5 | ಉಡುಪಿ | 177 |
| 6 | ಗದಗ | 197 |
| 7 | ಕಲಬುರಗಿ | 205 |
| 8 | ದಾವಣಗೆರೆ | 212 |
| 9 | ಕೋಲಾರ | 341 |
| 10 | ಕೊಪ್ಪಳ | 748 |
| 11 | ಮೈಸೂರು | 117 |
| 12 | ರಾಮನಗರ | 124 |
| 13 | ತೂಮಕೂರು | 88 |
| 14 | ಯಾದಗಿರಿ | 88 |
| 15 | ರಾಯಚೂರು | 60 |
| 16 | ಬೆಂಗಳೂರು ನಗರ | 190 |
| 17 | ಬೆಂಗಳೂರು ಗ್ರಾಮಾಂತರ | 63 |
| 18 | ಹಾವೇರಿ | 419 |
| 19 | ಕಾರವಾರ | 175 |
| 20 | ಕ್ಯಾಪ್ಯೂಟೆಕ್, ರಾಯಚೂರು | 267 |
| 21 | ಧಾರವಾಡ-ಟಾಟಾ ಹಿಟಾಚಿ | 10 |
| ಒಟ್ಟು | | **4239** |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1179ಕ್ಕೆ ಅನುಬಂಧ–02

| ಆರ್.ಪಿ.ಎಲ್ (R.P.L) ಯೋಜನೆಯಡಿ 2020–21 ನೇ ಸಾಲಿನಲ್ಲಿ ತರಬೇತಿಯ ಪಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ಜಿಲ್ಲೆ | ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ. |
| 1 | ಬಳ್ಳಾರಿ | 3471 |
| 2 | ಬೆಂಗಳೂರು | 232 |
| 3 | ಚಾಮರಾಜನಗರ | 1560 |
| 4 | ಹಾವೇರಿ | 404 |
| 5 | ಮಂಡ್ಯ | 343 |
| 6 | ಮೈಸೂರು | 345 |
| 7 | ತುಮಕೂರು | 421 |
| ಒಟ್ಟು | | 6776 |